
# ಕಣ್ಣಾ ಮುಚ್ಚೆ ಕಾಡೇಗೂಡೆ... ಕಣ್ಣ ಮುಂದೆ ಏನ್ ಬಂತು...?


# ಅಗೋ ನೋಡು(2)



ಇದು ನಿಮಗೆ ಆಶ್ಚರ್ಯವಾಗಬಹುದು, ಆದರೆ ಪ್ರಕೃತಿಯನ್ನು ಅನುಭವಿಸಲು ನೀವು ಹೊರಗೆ ಹೋಗಬೇಕಾಗಿಲ್ಲ! ನಿಮ್ಮ ಮನೆಯ ಸುತ್ತಲೂ, ಕಿಟಕಿಯ ಮೂಲಕ, ಬಾಗಿಲಿನ ಹಿಂದೆ ಅಥವಾ ಹೂಕುಂಡದ ಕೆಳಗೆ ನೋಡಿ - ಕೆಳಗಿನ ಯಾವುದಾದರೂ ಮೂರನ್ನು ನೇರಕ್ಕೆ ಅಥವಾ ಅಡ್ಡಲಾಗಿ ಹುಡುಕಿ ಹಾಗೂ **ಬಿಂಗೊ** ಎಂದು ಹೇಳಿ!




ಈ ಬಿಂಗೊದಲ್ಲಿರುವ ಜೀವಿಗಳು ಮತ್ತು ಸಸ್ಯಗಳ ಬಗ್ಗೆ ನೀವು ಇನ್ನಷ್ಟು ತಿಳಿದುಕೊಳ್ಳಲು ಬಯಸುವಿರಾ? ಕೆಳಗಿನ **ಪ್ರಕೃತಿ ಚಟುವಟಿಕೆಗಳನ್ನು** ಅನ್ವೇಷಿಸಿ!




**ಸಲಹೆ:** ಪ್ರಿಂಟ್ ಔಟ್ ಅಗತ್ಯವಿಲ್ಲ! ಒಂದು ಕಾಗದದ ಮೇಲೆ ನೀವೇ ಇದನ್ನು ಚಿತ್ರಿಸಿ ಮತ್ತು ಸಂಖ್ಯೆ ಬರೆದು ಬಿಂಗೋ ಆಡಿ!

Nature Classrooms
nature conservation foundation
Maadhyama Aneka ಮಾಧ್ಯಮ ಅನೇಕ

ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ.This work is licensed to Nature Classrooms under CC BY-SA 4.0 https://creativecommons.org/licenses/by-sa/4.0/

# ಚಟುವಟಿಕೆಗಳು

**ಈಗ ತಲೆ ಓಡಿಸುವ ಸಮಯ! ಈ ವಿಶೇಷ ಚಟುವಟಿಕೆಗಳ ಮೂಲಕ ನಿಮ್ಮ ನೈಸರ್ಗಿಕ ನೆರೆಹೊರೆಯವರನ್ನು ಚೆನ್ನಾಗಿ ತಿಳಿದುಕೊಳ್ಳಿ. ಬಿಂಗೊ ಚೌಕದಲ್ಲಿರುವ ಸಂಖ್ಯೆಗಳ ಮೂಲಕ ಜೀವಿ ಅಥವಾ ಸಸ್ಯಕ್ಕೆ ಈ ಚಟುವಟಿಕೆಯನ್ನು ಹೊಂದಿಸಿ.**

**1** ನಿಮ್ಮ ಕಿಟಕಿ ಅಥವಾ ಬಾಲ್ಕನಿಯಿಂದ ಟೆಲಿಫೋನ್ ತಂತಿಗಳು ಮತ್ತು ಕಂಬಗಳ ಮೇಲೆ ಪಕ್ಷಿಗಳು ಕುಳಿತಿರುವುದು ನಿಮಗೆ ಕಾಣುತ್ತಿದೆಯೇ? ಅವುಗಳನ್ನು ವಿವರಿಸಿ ಮತ್ತು ಅವುಗಳ ಗಾತ್ರ, ಬಣ್ಣ, ಕೊಕ್ಕು ಮತ್ತು ನಡವಳಿಕೆಯನ್ನು ಗಮನಿಸಿ. ಅವು ಏನು ಮಾಡುತ್ತಿವೆ/ ನೋಡುತ್ತಿವೆ? ಅವು ಎಷ್ಟು ಬಾರಿ ಬರುತ್ತಾ ಇರುತ್ತವೆ? ನೀವು ಪಕ್ಷಿಯಾಗಿದ್ದರೆ, ನೀವು ತಂತಿ / ಕಂಬದ ಮೇಲೆ ಕುಳಿತು ನೋಡಬಹುದಾದ ಕೆಲವು ವಿಷಯಗಳು - ದೃಶ್ಯವನ್ನು ಬರೆಯಿರಿ ಅಥವಾ ಬಿಡಿಸಿ.

**2** ನಿಸರ್ಗದಿಂದ ಪ್ರೇರಿತವಾದ ವಿನ್ಯಾಸಗಳು ಮತ್ತು ಮಾದರಿಗಳನ್ನು ಹೊಂದಿರುವ ವಸ್ತುಗಳನ್ನು (ಉದಾಹರಣೆಗೆ ಪಕ್ಷಿ ಮಾದರಿಯ ಬೆಡ್ ಶೀಟ್, ಟೈಲ್ಸ್‌ನಲ್ಲಿ ಎಲೆಗಳ ಮಾದರಿಗಳು ಅಥವಾ ಮರದಲ್ಲಿ ಕೆತ್ತಿದ ಪ್ರಾಣಿ!) ಹುಡುಕಲು ನಿಮ್ಮ ಮನೆಯ ಸುತ್ತಲೂ ನೋಡಿ.
ಈ ಯಾವುದೇ 2 ವಿನ್ಯಾಸಗಳ ಬಗ್ಗೆ ಕಥೆಯನ್ನು ಬರೆಯಿರಿ ಹಾಗೂ ಅವುಗಳಿಗೆ ಹೆಸರುಗಳನ್ನು ನೀಡಿ. ಅವರು ಹೇಗೆ ಭೇಟಿಯಾಗುತ್ತಾರೆ? ಅವರು ಒಬ್ಬರನ್ನೊಬ್ಬರು ಇಷ್ಟಪಡುತ್ತಾರೆಯೇ? ನಿಮ್ಮ ಕುಟುಂಬದೊಂದಿಗೆ ನಿಮ್ಮ ಈ ಕಥೆಯನ್ನು ಹಂಚಿಕೊಳ್ಳಿ- ಅವರಿಗಾಗಿ ಬೊಂಬೆ ಆಟದ ಪ್ರದರ್ಶನವನ್ನು ಮಾಡಿ! ನೀವು ಕಾಗದದಿಂದ ಬೊಂಬೆಗಳನ್ನು ಮಾಡಬಹುದು, ಅಥವಾ ಈ ವಿನ್ಯಾಸದ ವಸ್ತುಗಳು ಚಿಕ್ಕದಾಗಿದ್ದರೆ, ಅವುಗಳನ್ನೇ ಬೊಂಬೆಗಳಾಗಿ ಬಳಸಿ. ನಿಮ್ಮ ಬೊಂಬೆಗಳ ಪ್ರದರ್ಶನದ ರೆಕಾರ್ಡಿಂಗ್ ಅಥವಾ ಫೋಟೋಗಳನ್ನು ನಮಗೆ ಕಳುಹಿಸಿ! ನಿಮಗೆ ಈ ವಿನ್ಯಾಸಗಳನ್ನು ಗುರುತಿಸುವಲ್ಲಿ ಸಹಾಯ ಬೇಕಾದರೆ, ನಿಮ್ಮ ಕುಟುಂಬದಲ್ಲಿನ ವಯಸ್ಕರನ್ನು ಕೇಳಿ.

**3** ಸೂಕ್ಷ್ಮವಾಗಿ ಆಲಿಸಿ - ಸೊಳ್ಳೆಗಳು ಗುಯ್ ಎಂದು ಮಾಡುವ ಶಬ್ದ ನಿಮಗೆ ಕೇಳುತ್ತಿದೆಯೇ? ಅದನ್ನು ಅನುಕರಿಸಲು ಪ್ರಯತ್ನಿಸಿ! ನಿಮ್ಮ ಪ್ರಕಾರ ಸೊಳ್ಳೆಯು ಈ ಶಬ್ದವನ್ನು ಮಾಡಲು ತನ್ನ ದೇಹದ ಯಾವ ಭಾಗವನ್ನು ಬಳಸುತ್ತದೆ? ಎಲ್ಲಾ ಸೊಳ್ಳೆಗಳು ಒಂದೇ ರೀತಿಯಲ್ಲಿ ಗುಯ್ ಎಂಬ ಶಬ್ದ ಮಾಡುತ್ತವೆಯೇ? ಸೊಳ್ಳೆಯ ಹಾಡು ನಿಮಗೆ ಹೇಗೆ ಕೇಳಿಸುತ್ತದೆ ಎಂಬುದರ ರೇಖಾಚಿತ್ರವನ್ನು ಬಿಡಿಸಿ.

**4** ನಿಮ್ಮ ಮನೆಯ ಸುತ್ತ ಗಾಳಿಯಲ್ಲಿ ಎಲೆಗಳು ತೇಲುತ್ತಾ, ಬೀಸುತ್ತಿರುವುದನ್ನು ನೀವು ನೋಡಿರುವಿರೆ? ಕೆಲವು ಎಲೆಗಳು ಬೀಳುವಾಗ ಸುಂದರವಾದ ನೃತ್ಯವನ್ನು ಮಾಡುತ್ತವೆ - ವಿವಿಧ ಆಕಾರ ಹಾಗೂ ಗಾತ್ರಗಳ ಎಲೆಗಳು ಹೇಗೆ ಬೀಳುತ್ತವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ. ನೀವೊಂದು ಮರದಿಂದ ಬೀಳುತ್ತಿರುವ ಎಲೆ ಎಂದು ಊಹಿಸಿಕೊಳ್ಳಿ - ನೀವು ಗಾಳಿಯಲ್ಲಿ ಹೇಗೆ ನೃತ್ಯ ಮಾಡುತ್ತೀರಿ? ನೀವು ಮತ್ತು ನಿಮ್ಮ ಕುಟುಂಬದವರು ಸುಂದರವಾದ ಎಲೆ ನೃತ್ಯವನ್ನು ಮಾಡಲು ಪ್ರಯತ್ನಿಸಬಹುದೇ? ನಮಗೆ ಅದರ ವೀಡಿಯೊ ಕಳುಹಿಸಿ!



ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ. ಇನ್ನಷ್ಟು ತಿಳಿಯಲು, ಭೇಟಿ ನೀಡಿ: bit.ly/natureframework ಅನುವಾದ: ಅದಿತಿ ರಾವ್
This work is licensed under CC BY-SA 4.0 https://creativecommons.org/licenses/by-sa/4.0/

**5** ಈ ಜೇಡವನ್ನು ಎಚ್ಚರಿಕೆಯಿಂದ ಗಮನಿಸಿ - ಅದು ಹೇಗೆ ವರ್ತಿಸುತ್ತದೆ? ಅದು ಹೇಗೆ ಸುತ್ತುತ್ತದೆ? ಅದು ಎಲ್ಲಿ ವಾಸಿಸುತ್ತದೆ? ಈ ಜೇಡ ನಿಮ್ಮ ಸ್ನೇಹಿತ/ತೆ ಎಂದು ಕಲ್ಪಿಸಿಕೊಳ್ಳಿ - ಅದಕ್ಕೊಂದು ಸುಂದರ ಹೆಸರು ಹಾಗೂ ವಯಸ್ಸನ್ನು ನೀಡಿ. ನಿಮ್ಮ ಪೋಷಕರಿಗೆ ನಿಮ್ಮ ಈ ಹೊಸ ಸ್ನೇಹಿತ/ತೆಯನ್ನು ಪರಿಚಯಿಸಿ ಕೊಡಿ.

**ಬೋನಸ್**: ಕಳೆದ ವಾರ, ನೀವು ಈ ಹಾರುವ ಜೇಡದ ದೂರದ ಸೋದರಸಂಬಂಧಿ, ಉದ್ದ ಕಾಲಿನ ಜೇಡವನ್ನು ಭೇಟಿಯಾಗಿರಬಹುದು (ಹಿಡನ್ ಹೌಸ್‌ಮೇಟ್ಸ್ 1 ಅನ್ನು ನೋಡಿ). ವೃತ್ತದ ಚಾರ್ಟ್ (ವೆನ್ ರೇಖಾಚಿತ್ರ) ಮಾಡಿ ಮತ್ತು ಈ ಎರಡೂ ಜೇಡಗಳನ್ನು ಹೋಲಿಕೆ ಮಾಡಿ. ಅವುಗಳಲ್ಲಿ ಎರಡರಲ್ಲೂ ಸಾಮಾನ್ಯವಾಗಿ ಕಾಣುವ ಅಂಶಗಳು ಏನು? ಅವೆರಡು ಒಂದಕ್ಕೊಂದು ಹೇಗೆ ಭಿನ್ನವಾಗಿವೆ?





**6** ನಿಮ್ಮ ಮನೆಯಲ್ಲಿ ನಿಮ್ಮನ್ನು ನೀವು ಅಡಗಿಕೊಳ್ಳುವಿರಿ? ನೀವು ಗೂಡು ಹುಳುವಿನಂತೆ ಅಡಗಿರುವಾಗ ನಿಮ್ಮ ತಂದೆ-ತಾಯಿ, ಒಡಹುಟ್ಟಿದವರಲ್ಲಿ ನಿಮ್ಮನ್ನು ಹುಡುಕಲು ಹೇಳಿ!

**7** ನೀವು ಜಿರಳೆಮಗು (ಕಾಕ್ರೋಚ್‌ಕಿಡ್) ಎಂಬ ಸೂಪರ್‌ಹೀರೋ ಎಂದು ಕಲ್ಪಿಸಿಕೊಳ್ಳಿ! ನಿಮ್ಮ ಮಹಾಶಕ್ತಿಗಳು ಯಾವುವು? ನೀವು ಏನು ತಿನ್ನುತ್ತೀರಿ ಮತ್ತು ಕುಡಿಯುತ್ತೀರಿ? ನಿಮ್ಮ ವೇಷಭೂಷಣ ಹೇಗಿರುತ್ತದೆ? ನೀವು ಅಪರಾಧದ ವಿರುದ್ಧ ಹೋರಾಡುತ್ತೀರಾ? ನಿಮ್ಮ ಕುಟುಂಬದವರಿಗೆ ಇದರ ಬಗ್ಗೆ ಭಾಷಣ ಮಾಡಿ ಮತ್ತು ಅದರ ವೀಡಿಯೊವನ್ನು ನಮ್ಮೊಂದಿಗೆ ಹಂಚಿಕೊಳ್ಳಿ!

**8** ನಿಮ್ಮ ಮನೆಯ ಒಂದು ನಕ್ಷೆಯನ್ನು ಮಾಡಿ, ಮತ್ತು ಅದು ಇರುವೆಗಳ ವಸಾಹತು ಎಂದು ಊಹಿಸಿಕೊಳ್ಳಿ. ಇಲ್ಲಿ ರಾಣಿ ಇರುವೆ ಯಾರಾಗಬಹುದು? ರಾಣಿ ಇರುವೆ ಯಾವ ಕೋಣೆಯಲ್ಲಿ ವಾಸಿಸಬಹುದು? ಹಾಗೂ ಕೆಲಸಗಾರ ಮತ್ತು ಸೈನಿಕ ಇರುವೆಗಳು ಯಾರು? ನಿಮ್ಮನ್ನು ಮತ್ತು ನಿಮ್ಮ ಕುಟುಂಬ ಸದಸ್ಯರನ್ನು ಇರುವೆಗಳ ವಸಾಹತಿನ ಸದಸ್ಯರು ಎಂದುಕೊಂಡು ಚಿತ್ರ ಬಿಡಿಸಿರಿ.

**9** ಮನೆಯಲ್ಲಿನ ನೊಣಗಳು ತಮ್ಮ ಪಾದಗಳಿಂದ ರುಚಿ ನೋಡುತ್ತವೆ ಎಂದು ನೀವು ಓದಿರಬಹುದು. ಅಂದರೆ ಅದರರ್ಥ ಅವು ಯಾವುದರ ಮೇಲೆಯಾದರೂ ನಡೆದಾಗ ಅದರ ರುಚಿಯನ್ನು ತಿಳಿಯಬಹುದು! ನಿಮ್ಮ ಪಾದಗಳಿಂದ ನೀವು ರುಚಿ ಸವಿಯಲು ಸಾಧ್ಯವಾದಲ್ಲಿ, ಒಂದು ದಿನದಲ್ಲಿ ನೀವು ಏನೇನೆಲ್ಲವುಗಳ ರುಚಿ ನೋಡುತ್ತೀರಿ? ಅವುಗಳ ಪಟ್ಟಿ ಮಾಡಿ! ನಿಮ್ಮ ಈ ಪಟ್ಟಿಯಿಂದ ನೀವು ಯಾವುದಾದರು ತಿಂಡಿಯ ಪಾಕವಿಧಾನವನ್ನು ಮಾಡಬಹುದೇ?



ನೇಚರ್ ಕ್ಲಾಸ್‌ರೂಮ್‌ನಿಂದ ರಚಿಸಲಾಗಿದೆ, ಮಕ್ಕಳು ಮತ್ತು ವಯಸ್ಕರನ್ನು ಪ್ರಕೃತಿಗೆ ಪರಿಚಯಿಸಲು ಲಾಭರಹಿತ ಉಪಕ್ರಮ. ಇನ್ನಷ್ಟು ತಿಳಿಯಲು, ಭೇಟಿ ನೀಡಿ: bit.ly/natureframework ಅನುವಾದ: ಅದಿತಿ ರಾವ್
This work is licensed under CC BY-SA 4.0 https://creativecommons.org/licenses/by-sa/4.0/